**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5007/2023 & 5048/2024.**

**ಸಿ.ಡಬ್ಲ್ಯೂಃ-4 ಪಿ.ಡಬ್ಲ್ಯೂಃ-3**

**ದಿಃ 29.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಸುವರ್ಣಾ ಲಕ್ಷ್ಮಣ ಹುಸೇನಕರ |
| ವಯಸ್ಸು | : | 51 ವರ್ಷ. |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಕೆಂಚೇವಾಡಿ ತಾಃ ಚಂದಗಡ, ಮಹಾರಾಷ್ಟ್ರ. |

ಸಾಕ್ಷಿಗೆ ಕನ್ನಡ ಭಾಷ್ಷೆ ಬರುವುದಿಲ್ಲದ ಕಾರಣ ಮರಾಠಿ ಭಾಷೆಯಿಂದ ಕನ್ನಡ ಭಾಷೆಗೆ ಅನುವಾದ ಮಾಡಲು ಶ್ರೀ ಎ.ಸಿ.ಕಮತೆ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಕ ಮಾಡಿ ಸಾಕ್ಷಿ ಹೇಳಿಕೆಯನ್ನು ದಾಖಲು ಮಾಡಲಾಯಿತು.

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

1) ಚಾ.ಸಾ.1 ಮತ್ತು ಮೃತ ಮಹಾದೇವ ನನ್ನ ಸಂಬಂಧಿಕರು. 1ನೇ ಆರೋಪಿ ಮೃತ ಮಹಾದೇವನ ಹೆಂಡತಿ. 2 ಮತ್ತು 3ನೇ ಆರೋಪಿಗಳು ನನಗೆ ಗೊತ್ತಿಲ್ಲ. ಮೃತ ಮಹಾದೇವ ತನ್ನ ಕುಟುಂಬದೊಂದಿಗೆ ಬೆಳಗಾವಿಯಲ್ಲಿ ವಾಸವಿದ್ದು, ಹೊಟೇಲನಲ್ಲಿ ಕೆಲಸ ಮಾಡುತ್ತಿದ್ದ. ಆತನ ಸ್ವಂತ ಊರು ಮೋದಗೆ. ಮೃತ ಮಹಾದೇವ ಸುಮಾರು 6 ವರ್ಷಗಳ ಹಿಂದೆ ಕ್ಯಾನ್ಸರ ಕಾಯಿಲೆಯಿಂದ ಮರಣ ಹೊಂದಿರುತ್ತಾನೆ. ಆ ಸಮಯದಲ್ಲಿ

ಗಂಡ–ಹೆಂಡತಿಯರ ಸಂಬಂಧ ಹೇಗೆ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಗಳ ಕಿರುಕುಳ ತಾಳಲಾರದೇ ಮನನೊಂದು ಮಹಾದೇವ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

1) ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಮಹಾದೇವನಿಗೆ ಕ್ಯಾನ್ಸರ ಆದ ನಂತರ ಆತನ ಯೋಗಕ್ಷೇಮವನ್ನು ನೋಡಿಕೊಳ್ಳದೇ 2ನೇ ಆರೋಪಿಯೊಂದಿಗೆ ಅಕ್ರಮ ಸಂಬಂಧ ಹೊಂದಿ ಆತನ ಜೊತೆ ತಿರುಗಾಡುತ್ತಿದ್ದಳು ಎಂದರೆ ಸುಳ್ಳು. ದಿನಾಂಕಃ 16.11.2020 ರಂದು 1 ಮತ್ತು 2ನೇ ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ತಡೆದು ನಿಲ್ಲಿಸಿ ಕೇಳಿದಾಗ ನಾವು ಜೊತೆಯಲ್ಲಿ ತಿರುಗಾಡುತ್ತೇವೆ ನೀನು ಎನಾದರೂ ಮಾಡಿಕೋ ಎಂದು ಮತ್ತು ಅಡ್ಡಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಮಹಾದೇವನಿಗೆ ಧಮಕಿ ಹಾಕಿದ್ದಾರೆಂದು ಹೇಳಿಕೆ ನೀಡಿದ್ದೇನೆ ಎಂದರೆ ಸುಳ್ಳು. ಈ ವಿಚಾರವನ್ನು ಮೃತ ಮಹಾದೇವ ನನಗೆ ಹೇಳಿದ್ದಾನೆ ಎಂದರೆ ಸುಳ್ಳು. ನಂತರ ನಾನು ಮತ್ತು ಮೃತ ಮಹಾದೇವ 1 ಮತ್ತು 2ನೇ ಆರೋಪಿಗಳಿಗೆ ಬುದ್ದಿವಾದ ಹೇಳಿದ್ದೇವೆ ಎಂದರೆ ಸುಳ್ಳು. ಈ ವಿಚಾರವನ್ನು ನಾನು ಮತ್ತು ಮೃತ ಮಹಾದೇವ 3ನೇ ಆರೋಪಿಗೆ ತಿಳಿಸಿದ್ದೇವೆ ಎಂದರೆ ಸುಳ್ಳು. ನಂತರ 3ನೇ ಆರೋಪಿಯು ಈ ವಿಚಾರವನ್ನು ಯಾರಿಗಾದರೂ ತಿಳಿಸಿದರೆ ನಿಮ್ಮನ್ನು

ಜೀವ ಸಹಿತ ಬಿಡುವುದಿಲ್ಲ ಎಂದು ನಮಗೆ ಧಮಕಿ ಹಾಕಿದ್ದಾನೆ ಎಂದರೆ ಸುಳ್ಳು.

2) ದಿನಾಂಕಃ 16.12.2020 ರಂದು ಮುಂಜಾನೆ 7 ಗಂಟೆಯ ಸಮಯಕ್ಕೆ ಚಾ.ಸಾ.1 ರವರು ನನಗೆ ಪೋನ ಮಾಡಿ ಮಹಾದೇವನು ಹಿಂದಿನ ರಾತ್ರಿ 9 ಗಂಟೆಯಿಂದ ಮುಂಜಾನೆ 06.30 ಗಂಟೆ ಸಮಯದಲ್ಲಿ ತಮ್ಮ ಮನೆಯಲ್ಲಿ ಹಗ್ಗದಿಂದ ನೇಣು ಹಾಕಿಕೊಂಡು ಮರಣ ಹೊಂದಿರುತ್ತಾನೆಂದು ತಿಳಿಸಿದ್ದಾರೆ ಎಂದರೆ ಸುಳ್ಳು. ಮೃತ ಮಹಾದೇವನು ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿಗಳೇ ಕಾರಣ ಎಂದು ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸುಳ್ಳು. ಸದರಿ ಹೇಳಿಕೆಯನ್ನು ನಿ.ಪಿ.8 ಎಂದು ಗುರುತಿಸಲಾಯಿತು. ನಾನು ನಿ.ಪಿ.8 ಪೋಲಿಸಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿತರ ಪರ:- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾ.ಓ.ಹೆ.ಕೆ.ಸ.ಅ.)

(ವಿಜಯ ಕುಮಾರ)
7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕೋಡಿ.

**ಭಾಷಾಂತರಕಾರರ ಸಹಿ**